# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ110/2017**
**ಪಿ.ಡಬ್ಲ್ಯೂಃ1, ಶಿವಲೀಲಾ**

ದಿನಾಂಕ :27-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು :- ಶ್ರೀಮತಿ ಎಮ್ ವಿ ಎಲ್ ವಕೀಲರಿಂದ

ನಮ್ಮ ತಂದೆಗೆ 4 ಜನ ಮಕ್ಕಳು ನಾನು, ಶ್ರೀದೇವಿ, ಅಪ್ಪಾಸಾಹೇಬ ಮತ್ತು ಜಗದೀಶ. ನಮ್ಮ ತಂದೆ ಒಕ್ಕಲುತನ ಮಾಡುತ್ತಿದ್ದರು. ನನ್ನ ತಂದೆಗೆ ಅವರ ಹಿರಿಯರ ಕಡೆಯಿಂದ ಕೊಡ್ಲಾ ಗ್ರಾಮದಲ್ಲಿ 30 ಎಕರೆ ಜಮೀನು ಬಂದಿತ್ತು. ನಾನು ಬಿ ಎ ಪ್ರಥಮ ವರ್ಷದವರೆಗೆ ಓದಿರುತ್ತೇನೆ. ನನ್ನ ಜನ್ಮ ದಿನಾಂಕ 05-11-1981. ದಿನಾಂಕ 21-05-2003 ರಲ್ಲಿ ನನ್ನ ಮದುವೆಯಾಗಿರುತ್ತದೆ. ದಾವಾ ಸ್ವತ್ತು ಸರ್ವೆ ನಂಬರ 10 ಇದು 11 ಎಕರೆ 27 ಗುಂಟೆ ಅದರ ಚೆಕ್ಕು ಬಂದಿ ಪೂರ್ವಕ್ಕೆ ಎನ್ ಎ ಲ್ಯಾಂಡ ಅದೇ ಸರ್ವೆ ನಂಬರ ಪಶ್ಚಿಮಕ್ಕೆ ಸರ್ವೆ ನಂಬರ 11 ಇರುತ್ತದೆ. ಉತ್ತರಕ್ಕೆ ವಿಶ್ವನಾಥ ಹೊನ್ನಮಾನ ದಕ್ಷಿಣಕ್ಕೆ ರಸ್ತೆ ಇದೆ. ಸರ್ವೆ ನಂಬರ 14 ಎಕರೆ 34 ಗುಂಟೆ ಇದ್ದು ಅದರ ಪೂರ್ವಕ್ಕೆ ಸರ್ವೆ ನಂಬರ 10, ಪಶ್ಚಿಮಕ್ಕೆ ಸರ್ವೆ ನಂಬರ 12 ಮತ್ತು ಚಂದ್ರಮಾ ಗೊಟೂರು ಉತ್ತರಕ್ಕೆ ರಾಮಚಂದ್ರ ದಕ್ಷಿಣಕ್ಕೆ ಬಸಪ್ಪ ತಂದೆ ಶರಗೌಡ ಇರುತ್ತಾರೆ. ಸರ್ವೆ ನಂಬರ 10 ರ ಪೂರ್ವಕ್ಕೆ 4 ಎಕರೆ ಎನ್ ಎ ಆಗಿದ್ದು ಅದು ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ಅದು 1995 ರಲ್ಲಿ ಎನ್ ಎ ಆಗಿದೆ ಎಂದರೆ ಸರಿ.

ನಿಪಿ-1 ವಿಲ್ಲ ಇದನ್ನು ನನ್ನ ಅಜ್ಜಿ ಗುಂಡಮ್ಮ ನನಗೆ 2003 ರಲ್ಲಿ ಕೊಟ್ಟಿರುತ್ತಾರೆ. 2003 ರಿಂದ ಈ ದಾವೆ ಹಾಕುವವರೆಗೂ ಸದರಿ ದಾಖಲೆ ನನ್ನ ಕಬ್ಜೆಯಲ್ಲಿತ್ತು ಎನ್ನುವುದು ಸರಿ. ಈ ವಿಲ್ಲ ಆಧಾರದ ಮೇಲೆ ಪ್ರೊಬೇಟ್ ಪಡೆಯಲು ಅಥವಾ ಪಹಣಿಯಲ್ಲಿ ಬದಲಾವಣೆ ಮಾಡಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆಗೆ ಮಾಡಲು ಹೇಳಿದೆ ಅವರು ಮಾಡಿಲ್ಲ ಎಂದು ಹೇಳುತ್ತಾರೆ. ಈ ದಾವಾ ಸ್ವತ್ತಿನ ಬಗ್ಗೆ ಕಂದಾಯವನ್ನು ನಾನು ನನ್ನ ತಂದೆಗೆ ಕಟ್ಟಲು ಹೇಳುತ್ತಿದ್ದೆ ಅವರೇ ಕಟ್ಟಿರುತ್ತಾರೆ. ಗುಂಡಮ್ಮ ತೀರಿಕೊಂಡ ನಂತರ ದಾವಾ ಸ್ವತ್ತಿನ ಪಹಣಿಯನ್ನು ನಾನು ನೊಡಿಲ್ಲ. ಅದು ಯಾರ ಹೆಸರಿಗೆ ಇತ್ತು ಎಂದು ನಾನು ನೋಡಿಲ್ಲ ಆದರೆ ನನ್ನ ಅಜ್ಜಿಯ ಹೆಸರಿಗೆ ಇದ್ದ ಬಗ್ಗೆ ಗೊತ್ತಿತ್ತು ಎಂದು ಹೇಳುತ್ತಾರೆ.

ನನ್ನ ತಾಯಿಗೆ ಸಂಗಮ್ಮ ಎನ್ನುವ ಅಕ್ಕ ಇದ್ದಾರೆ ಎಂದರೆ ಸರಿ. ಗುಂಡಮ್ಮನಿಗೆ ನನ್ನ ತಾಯಿ ಹಾಗೂ ಪ್ರತಿವಾದಿ-2 ಇಬ್ಬರು ಮಕ್ಕಳು ಎಂದರೆ ಸರಿ. ಗುಂಡಮ್ಮ ಇವರ ಗಂಡ ನಾನು ಹುಟ್ಟುವ ಮೊದಲು ತೀರಿಕೊಂಡಿರುತ್ತಾರೆ. ಗುಂಡಮ್ಮ ಇವರು ಅವರ ಗಂಡ ತೀರಿಕೊಂಡ ನಂತರ ಅವರ ಮನೆಯಲ್ಲಿ ಹೊಲ ಮನೆ ಮಾಡಿಕೊಂಡು ಇರುತ್ತಿದ್ದರು. ಈಗ ನನ್ನ ತಂದೆ ತಾಯಿ ಕೊಡ್ಲಾ ಗ್ರಾಮದಲ್ಲಿರುತ್ತಾರೆ. ಸಂಗಮ್ಮ ಇವರಿಗೆ ಚಿಂಚೋಳ್ಳಿ ತಾಲ್ಲೂಕು ಕೊಡದಳ್ಳಿ ಗ್ರಾಮಕ್ಕೆ ಕೊಟ್ಟಿರುತ್ತಾರೆ. ದಾವಾ ಸ್ವತ್ತನ್ನು ಕಬಳಿಸಲು ನಿಪಿ-1 ವಿಲ್ಲನ್ನು ನಾನು ಮತ್ತು ನನ್ನ ತಂದೆ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ, ಗುಂಡಮ್ಮ ಯಾವುದೇ ವಿಲ್ಲ ಬರೆದಿಲ್ಲ ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ110/2017**
**ಪಿ.ಡಬ್ಲ್ಯೂಃ1, ಶಿವಲೀಲಾ**

ಗುಂಡಮ್ಮ ಜೀವಂತ ಇದ್ದಾಗಲೇ ದಾವಾ ಸ್ವತ್ತಿನ ಬಗ್ಗೆ ಹಕ್ಕು ಬದಲಾವಣೆಯನ್ನು ಅಪ್ಪಸಾಬ ಇವರ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಅದು ಸುಳ್ಳು ಎಂದು ಹೇಳುತ್ತಾರೆ. ಸದರಿ ಗುಂಡಮ್ಮ ಇವರು ಸರ್ವೆ ನಂಬರ 10 ರಲ್ಲಿ ಉಳಿದ 4 ಎಕರೆ ಎನ್ ಎ ಜಾಗದ ಮೇಲೆ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಪಡೆದಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಅಪ್ಪಾಸಾಬ ಇವರು ದಾವಾ ಸ್ವತ್ತಿನ ಮೇಲೆ 2 ಲಕ್ಷ ರೂಪಾಯಿ ಸಾಲವನ್ನು ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಪ್ಪಸಾಹೇಬ ಇವರು 1 ನೇ ಪ್ರತಿವಾದಿಯನ್ನು ದಿನಾಂಕ 01-06-2009 ರಂದು ಮದುವೆಯಾಗಿರುತ್ತಾರೆ. ಅಪ್ಪಾಸಾಹೇಬ ಇವರು ದಿನಾಂಕ 13-12-2009 ರಲ್ಲಿ ತೀರಿಕೊಂಡರು ಎಂದರೆ ಸರಿ. ಅವರು ಯಾವ ರೀತಿ ತೀರಿಕೊಂಡರು ಎಂದರೆ ಸಾಕ್ಷಿ ಹೊಟ್ಟೆನೋವು ಎಂದು ಹೇಳಿದ್ದು ಒಂದೇ ವಾರದಲ್ಲಿ ತೀರಿಕೊಂಡರು ಆ ಸಮಯದಲ್ಲಿ ಅವರ ಹೆಂಡತಿ ಗರ್ಬಿಣಿಯಾಗಿದ್ದು ಅವರ ಮರಣದ ನಂತರ ಮಗಳು ಜನಿಸಿದ್ದರು ಎಂದರೆ ಸರಿ. ಅವಳಿಗೆ ಈಗ 12 ವರ್ಷ ವಯಸ್ಸು.

ದಾವಾ ಸ್ವತ್ತು ಅಪ್ಪಾಸಾಹೇಬ ಇವರ ಹೆಸರಿನಲ್ಲಿ ಇತ್ತು ಅವರೇ ಬಿತ್ತಿ ಬೆಳೆಯುತ್ತಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ. ಈಗಲು ಸಹ ಸದರಿ ಸ್ವತ್ತು 1 ನೇ ಪ್ರತಿವಾದಿಯ ಕಬ್ಜೆಯಲ್ಲಿ ಇದೆ ಎಂದರೆ ಸಾಕ್ಷಿ ನನ್ನ ಕಬ್ಜೆಯಲ್ಲಿದೆ ಎಂದು ಹೇಳುತ್ತಾರೆ. ದಾವಾ ಸ್ವತ್ತು ಅಪ್ಪಾಸಾಹೇಬ ಹೆಸರಿನಲ್ಲಿ ಪಹಣಿ ಇದ್ದ ಬಗ್ಗೆ ನನಗೆ ಗೊತ್ತಿತ್ತು ಪ್ರತಿವಾದಿ-1 ರ ಹೆಸರಿಗೆ ಖಾತೆ ಆದ ನಂತರ ನಾನು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 47 ಇದು ನನ್ನ ತಂದೆ ಅತ್ತೆ ನಾಗಮ್ಮನಿಗೆ ಸೇರಿದ ಸ್ವತ್ತು. ಸದರಿ ಸ್ವತ್ತನ್ನು ನನ್ನ ಹೆಸರಿಗೆ ನನ್ನ ತಂದೆಯ ತಂದೆ ರಾಮಚಂದ್ರ ಶೇಟ್ಟಿ ಇವರು ಮಾಡಿರುತ್ತಾರೆ. ಸದರಿ ಸ್ವತ್ತುನ್ನು ನಾನು ನನ್ನ ತಮ್ಮನ ಹೆಸರಿಗೆ ದಿನಾಂಕ 27-12-2016 ರಲ್ಲಿ ದಾನ ಪತ್ರದ ಮೂಲಕ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನನ್ನ ಮುತ್ಯಾ ಹೇಳಿದ್ದರಿಂದ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಸರ್ವೆ ನಂಬರ 4 ಕಾಳಗಿ ಗ್ರಾಮದಲ್ಲಿ 6 ಎಕರೆ 4 ಗುಂಟೆ ಇದು ಅಪ್ಪಸಾಹೇಬ ಮತ್ತು ಜಗಧೀಶ ಜಂಟಿ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ಸ್ವತ್ತು ಅಪ್ಪಾಸಾಹೇಬ ಇವರಿಗೆ ಮದುವೆಯಾಗಿಲ್ಲ ಎಂದು ಜಗಧೀಶ ಇವರ ಹೆಸರಿಗೆ ಮಾತ್ರ ನನ್ನ ತಂದೆ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ